***<u>ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜೇವರ್ಗಿ</u>***

***ಫೌಜುದಾರಿ ಪ್ರಕರಣ ಸಂಖ್ಯೆ : 143/2019***

***ಫಿರ್ಯಾದಿ :*** ***ಜೇವರ್ಗಿ ಪೋಲಿಸ್ ಠಾಣೆ ಪರವಾಗಿ***

***-ವಿರುದ್ದ-***

***ಆರೋಪಿಃ*** ***ನಾಗರಾಜ ತಂದೆ ಬಸವರಾಜ ಬಂಗಾರಿ,***
***ವಯಸ್ಸುಃ 20 ವರ್ಷ, ಉದ್ಯೋಗಃ ಕೂಲಿ,***
***ಸಾಕಿನಃ ಆಂದೋಲಾ ಗ್ರಾಮ, ತಾಃ ಜೇವರ್ಗಿ,***
***ಜಿಃ ಗುಲಬರ್ಗಾ.***

***<u>ಆರೋಪಣೆ</u>***

ಶ್ರೀ ಕುಮಾರ ಜಿ, ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿತರಾದ ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪಣೆಯನ್ನು ಹೊರಿಸುತ್ತೇನೆಃ

ದಿನಾಂಕ 15-12-2018 ರಂದು ಮಧ್ಯಾಹ್ನ 12-15 ಸುಮಾರಿಗೆ ಜೇವರ್ಗಿ ಪೋಲಿಸ ಠಾಣೆ ಸರಹದ್ದಿನಲ್ಲಿರುವ ಆಂದೋಲಾ ಗ್ರಾಮದ ಹನುಮಾನ ಗುಡಿಯ ಎದುರುಗಡೆ ರಸ್ತೆಯ ಮೇಲೆ ಸಾರ್ವಜನಿಕ ಸ್ಥಳದಲ್ಲಿ ಆರೋಪಿತನಾದ ನೀನು ಸಾರ್ವಜನಿಕರಿಂದ ಹಣ ಪಡೆದುಕೊಂಡು ಅಂಕಿ ಸಂಖ್ಯೆಯುಳ್ಳ ಮಟಕಾ ಚೀಟಿಗಳನ್ನು ಬರೆದುಕೊಡುತ್ತಾ ಮಟಕಾ ಜೂಜಾಟದಲ್ಲಿ ತೊಡಗಿಸಿಕೊಂಡಿದ್ದರಿಂದ ನೀವು ಕಲಂ 78(3) ಕರ್ನಾಟಕ ಪೋಲಿಸ ಕಾಯ್ದೆ ರಡಿಯಲ್ಲಿ ಅಪರಾಧವನ್ನು ಎಸಗಿರುವಿ.

ಪ್ರಶ್ನೆ-1ಃ ಇದೀಗ ಹೇಳಿದ ಮೇಲಿನ ಆಪಾದನೆ ತಿಳಿಯಿತಾ?

ಉತ್ತರಃ

ಪ್ರಶ್ನೆ-2ಃ ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿಯಾ ಅಥವಾ ವಿಚಾರಣೆಯಾಗಬೇಕೆ?

ಉತ್ತರಃ

***(ಸದರಿ ಹೇಳಿಕೆಯನ್ನು ನನ್ನ ಸಮಕ್ಷಮ ಆರೋಪಿಗೆ ಅರ್ಥವಾಗುವ ಭಾಷೆಯಲ್ಲಿ ಓದಿ ಹೇಳಿದ್ದು ಆರೋಪಿಯು ನ್ಯಾಯ್ಯಾಲಯದ ಮುಂದೆ ನೀಡಿದ ವಿಚಾರಣೆಗಳು ಸರಿ ಇರುತ್ತವೆ ಅಂತಾ ಈ ಮೂಲಕ ಪ್ರಮಾಣಿಕರಿಸಲಾಗಿದೆ.)***

*ಸ್ಥಳಃ ಜೇವರ್ಗಿ*
*ದಿನಾಂಕಃ 20-07-2019*

***(ಶ್ರೀ ಕುಮಾರ ಜಿ)***
*ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು*
***ಮತ್ತು ಜೆಎಮ್ ಎಫ್, ಜೇವರ್ಗಿ***